ಗ್ರಾಂಟ್ ಅಥವಾ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಕೋಟಿ ಎಂದು ಮಾಡಿದಾಗ ಹೆಚ್ಚಿನ ಕಾಮಗಾರಿಗಳನ್ನು ಈ ಎಲ್ಲಾ ಕ್ಷೇತ್ರಗಳಲ್ಲಿ ಮಾಡಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ಮೊನ್ನೆ ವಾರಾಹಿ ಯೋಜನೆ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವನ್ನು ನಾನೇ ತರಿಸಿಕೊಳ್ಳಬೇಕಾಯಿತು. ನನಗೆ ಮಂತ್ರಿಗಳಿಂದ ಬರಲಿಲ್ಲ ಅಥವಾ ಲೆಜಿಸ್ಲೇಚರ್‌ನಿಂದ ಬರಲಿಲ್ಲ. ನಾನು ಗಲಾಟೆ ಮಾಡಿ ಅಧಿಕಾರಿಗಳ ಮುಖೇನ ತರಿಸಿಕೊಳ್ಳ ಬೇಕಾಯಿತು. ನನ್ನ 14 ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ.

ಉಳಿದ ಪ್ರಶ್ನೆಗಳಿಗೆ ನನಗೆ ಉತ್ತರವೇ ಬರಲಿಲ್ಲ. ನಾನೇ ಅಲ್ಲಿಗೆ ಹೋಗಿ ಅಧಿಕಾರಿಗಳ ಮುಖೇನ ಉತ್ತರವನ್ನು ತರಿಸಿಕೊಳ್ಳಬೇಕಾಯಿತು. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಬಾರದು. ನಾವು ಕೇಳಿದ ಪ್ರಶ್ನೆಗೆ ಉತ್ತರ ಬರುವುದಿಲ್ಲ ಮತ್ತು ನಾವು ಕೇಳಿದ್ದಕ್ಕೆ ಗಮನವನ್ನೂ ಸಹಾ ಹರಿಸುವುದಿಲ್ಲ. ಕೇವಲ ನಮ್ಮ ಸಮಾಧಾನಕ್ಕೆ ಮಾತ್ರ ನಾವು ಮಾತನಾಡುವಂತಾಗಿದೆ. ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್‌ಮನ್: ನಾನು ಈಗ ಸದನವನ್ನು ಮಂದೂಡುತ್ತಿದ್ದೇನೆ. ಪುನಃ ಸದನವು ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವನ್ನು ಮಧ್ಯಾಹ್ನ ಒಂದು ಗಂಟೆ 2 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

(ಮತ್ತೆ ಸಭೆಯು ಮಧ್ಯಾಹ್ನ 3.00 ಗಂಟೆಗೆ ಪ್ರಾರಂಭಗೊಂಡಿತು) ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

7. ಸದನದಲ್ಲಿ ಸಚಿವರುಗಳ ಗೈರು ಹಾಜರಿ:

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರನ್ನಾದರೂ ಮುಂದಿನ ಸಾಲಿನಲ್ಲಿ ಬಂದು ಕುಳಿತುಕೊಳ್ಳಲು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: (ವಿರೋಧ ಪಕ್ಷದ ನಾಯಕರು) ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಪರಿಸ್ಥಿತಿ ಹೇಗಿದೆ ನೋಡಿ, ಇಲ್ಲಿ ಮಂತ್ರಿಗಳು ಇಲ್ಲ, ಸದಸ್ಯರುಗಳು ಇಲ್ಲ, ನಾವು ಏನು ಮಾಡುವುದು ಹೇಳಿ? ಹಿಂದಿನ ಸರ್ಕಾರವಿದ್ದಾಗ ಕೊನೆಯ ಆರು ತಿಂಗಳಲ್ಲಿ ಈ ರೀತಿಯ ಪರಿಸ್ಥಿತಿ ಇತ್ತು. ಆದರೆ ಈ ಸರ್ಕಾರದಲ್ಲಿ ಮೊದಲನೆಯ ವರ್ಷವೇ ಈ ಪರಿಸ್ಥಿತಿ ಇದೆ ಎಂದರೆ, ಇದು ಏನೆಂದು ನಮಗೆ ತಿಳಿಯುತ್ತಾ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವಾಗಿ ಮೊನ್ನೆಯ ದಿವಸ ಮಾನ್ಯ ಅಧ್ಯಕ್ಷರಲ್ಲೂ ವಿನಂತಿ ಮಾಡಿಕೊಂಡಿದ್ದೇವೆ. ಸದನದಲ್ಲಿ ಯಾರ್ಯಾರು ಮಂತ್ರಿಗಳು ಇರಬೇಕೆಂದು ಅಲಾಟ್ ಮಾಡಿರುತ್ತಾರೆ. ತಾವು ದಯಮಾಡಿ ಅವರ ಹೆಸರುಗಳನ್ನು ಹೇಳಬೇಕು, ಅವರು ಎಲ್ಲಿಗೆ ಹೋಗಿದ್ದಾರೆ, ನಿಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೋ ತಾವು ಇದನ್ನು ಸದನದಲ್ಲಿ ಅನೌನ್ಸ್ ಮಾಡಬೇಕು. ಆ ಮಂತ್ರಿಗಳು ಏಕೆ ಬಂದಿಲ್ಲ, ಎಲ್ಲಿಗೆ ಹೋಗಿದ್ದಾರೆ?

ಶ್ರೀ ಆರಗಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ನಾನು ಮೂರನೇ ಮಹಡಿಗೆ ಹೋಗಿದ್ದೆ, ಅಲ್ಲಿ ಬಹಳ ಜನ ಮಂತ್ರಿಗಳು ಇದ್ದಾರೆ. ಅವರು ಯಾರು ಸದನಕ್ಕೆ ಬರುವುದಿಲ್ಲ. ಈ ಸದನದ ಗೌರವ ಹರಾಜು ಆಗುತ್ತಿದೆ. ಪ್ರತಿನಿತ್ಯ ಇಡೀ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲಿ ಸಂಪಾದಕೀಯ ಕಾಲಂನಲ್ಲಿ ಸದಸ್ಯರಿಗೂ ಕೂಡ ಪಂಚಿಂಗ್ ಸಿಸ್ಟಂ ತರುತ್ತಾರೆನ್ನುವಂಥಾದ್ದು ಬಂದಿದೆ, ಮಾನ್ಯ ಕಾಗೋಡು ತಿಮ್ಮಪ್ಪನವರೆ ತಾವು ನೋಡಿ. ಈಗ ಪರಿಸ್ಥಿತಿ ಏನಾಗಬಹುದು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಇವರಿಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಹೇಳಿ ಬಿಡಲಿ, ನಾನು ಮೊನ್ನೆ ದಿವಸ ಹೇಳಿದ್ದೇನೆ. ಇವರು ಪುಸ್ತಕವನ್ನು ಕಳುಹಿಸಿದರೆ ನಾವು ಸಹಿ ಮಾಡಿ ಕಳುಹಿಸಿ ಬಿಡುತ್ತೇವೆ. ಈ ವಿಚಾರವಾಗಿ ಧರಣಿ ಮಾಡಿದ್ದೇವೆ. ವಾಕ್ ಔಟ್ ಮಾಡಿದ್ದೇವೆ.

ಇಷ್ಟೆಲ್ಲಾ ಹೇಳಿದರೂ ಇವರಿಗೆ ನಾಚಿಕೆಯಿಲ್ಲ ಎಂದರೆ ಇದು ನಿಜವಾಗಿಯೂ ತಲೆ ತಗ್ಗಿಸುವಂಥ ವಿಷಯ. ಇವರಿಗೆ ಪ್ರಜಾತಂತ್ರದಲ್ಲಿ ನಂಬಿಕೆಯೇ ಇಲ್ಲವೇ ಎಂದು ನನಗೆ ಅನುಮಾನವಿದೆ.

ಶ್ರೀ ಎಸ್.ಎಸ್. ಪಾಟೀಲ್: ಈಗ ಅವರಿಗಲ್ಲ, ನಮಗೆ ಅವಮಾನವಾಗುತ್ತಿದೆ. ಹಗಲೆಲ್ಲಾ, ಮೇಲಿಂದ ಮೇಲೆ ಇದನ್ನು ಹೇಳುತ್ತಾ ಹೇಳುತ್ತಾ, ಒಂದು ನಮೂನೆಯಲ್ಲಿ ನಮಗೇ ಅವಮಾನ ಆಗುವಂಥ ಪರಿಸ್ಥಿತಿಯನ್ನು ತಂದಿದ್ದಾರೆ.

ಶ್ರೀ ಕೆ. ಷಡಾಕ್ಷರಿ: ತಮ್ಮ ಕಡೆಯೂ ಸದಸ್ಯರ ಸಂಖ್ಯೆ ಕಡಿಮೆ ಇದೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಇನ್‌ಫಾರ್ಮಲ್ ಆಗಿ ಈ ಬಗ್ಗೆ ಚರ್ಚೆ ಮಾಡಿದೆವು. ನಾಳೆ ದಿವಸ ಕೆಲವು ಮಂತ್ರಿಗಳ ಮನೆಗಳಲ್ಲಿ ಮದುವೆ ಇರುವುದರಿಂದ ಅವರು ಸ್ವಲ್ಪ ಬ್ಯುಸಿಯಾಗಿರುತ್ತಾರೆ ಎನ್ನುವ ವಿಚಾರ ಪ್ರಸ್ತಾಪವಾಯಿತು. ಆಗ ನಾವು ಏನು ಹೇಳಿದೆವು ಎಂದರೆ, ನಿಮ್ಮ ಇರುವಿಕೆಯನ್ನು ನಾವು ಅಷ್ಟಾಗಿ ಒತ್ತಾಯ ಮಾಡುವುದಿಲ್ಲ ಎನ್ನುವ ಮಾತನ್ನು ನಮ್ಮ ಕಡೆಯಿಂದ ಹೇಳಿದ್ದೇವೆ. ಆದರೆ ದೃಶ್ಯ ಈ ರೀತಿ ಇರುತ್ತದೆ ಎಂದು ನಾವಂತೂ ಅಂದುಕೊಂಡಿರಲಿಲ್ಲ. ಆದ್ದರಿಂದಾಗಿ ಇದನ್ನು ಪ್ರಸ್ತಾಪ ಮಾಡಬೇಕಾಗಿ ಬಂದಿದೆ. ಅವರ ಇರುವಿಕೆಯನ್ನು ನಾವು ಅಷ್ಟು ಕಡ್ಡಾಯ ಮಾಡುವುದಿಲ್ಲ ಎಂದು ನಾವು ಅಲ್ಲಿ ಹೇಳಿರತಕ್ಕಂಥಾದ್ದು ನಿಜ. ಮಾನ್ಯ ಚಂದ್ರೇಗೌಡರ ಮಗಳ ಮದುವೆ ಇದೆ, ಅದೇ ರೀತಿ ಮಾನ್ಯ ಕೆ.ಹೆಚ್. ರಂಗನಾಥ್‌ರವರ ಮನೆಯಲ್ಲೂ ಕೂಡ ಮದುವೆ ಇದೆ, ಅದಕ್ಕೆ ಕೆಲವರು ಹೋಗಿರುತ್ತಾರೆ. ಇಲ್ಲಿ ಮಾನ್ಯ ತಿಮ್ಮಪ್ಪನವರು ಇದ್ದಾರೆ, ಒಟ್ಟು ಮೂರು ಜನ ಮಾನ್ಯ ಮಂತ್ರಿಗಳು ಮಾತ್ರ ಇದ್ದಾರೆ. ನಮ್ಮ ನಾಯಕರು ಹೇಳುತ್ತಿದ್ದಾರೆ, ಅದು ಮೂರು ಅಲ್ಲ, ಒಂದು

ಪೂರ್ತಿ, ಮತ್ತೊಂದು ಅರ್ಧ, ಇನ್ನೊಂದು ಅದರಲ್ಲಿ ಅರ್ಧ ಅಂದರೆ ಒಟ್ಟು ಒಂದೂಮುಕ್ಕಾಲು ಎಂದು. ಈ ರೀತಿಯಾಗಿ ನಡೆದುಕೊಳ್ಳತಕ್ಕಂಥಾದ್ದು ಸರ್ಕಾರಕ್ಕೆ ಯಾವ ವಿಧದಲ್ಲೂ ಕೂಡ ಉಚಿತವಲ್ಲ. ನಿನ್ನೆಯೂ ಕೂಡ ಈ ವಿಚಾರ ಪ್ರಸ್ತಾಪವಾಗಿದೆ. ಪ್ರತಿ ದಿವಸವೂ ನಾವು ಇದನ್ನು ಪ್ರಸ್ತಾಪ ಮಾಡಿ ಮಾಡಿ, ಇವತ್ತಿನ ದಿವಸ ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಏಕೆಂದರೆ, ಈ ಸಭೆಗೆ ಎಷ್ಟರ ಮಟ್ಟಿಗೆ ಗೌರವ ಸಿಗುತ್ತಿದೆ. ನಾವು ಇದನ್ನು ಹೆಚ್ಚಿಗೆ ಪ್ರಸ್ತಾಪ ಮಾಡಿದಷ್ಟೂ ಈ ಸಭೆಯ ಘನತೆ ಗೌರವಗಳಿಗೆ ಕುಂದು ತರತಕ್ಕಂಥ ಕೆಲಸವಾಗುತ್ತಿದೆ. ಈ ರೀತಿ ಈ ಸದನದ ಘನತೆ ಗೌರವಗಳಿಗೆ ಕುಂದು ಉಂಟು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ನಡೆಯುತ್ತಿರತಕ್ಕಂಥಾದ್ದು ಶುದ್ಧ ಅವಮಾನಕರ. ಈ ಸಭೆಯನ್ನು ನಡೆಸತಕ್ಕಂಥಾದ್ದಕ್ಕೆ ಸರ್ಕಾರಕ್ಕೆ ಇಷ್ಟವಿಲ್ಲದಿದ್ದರೆ ಬೇಡ.

ಉಪಾಧ್ಯಕ್ಷರು: ಒಂದೇ ಕಡೆ ಅಲ್ಲ, ಸದಸ್ಯರು ಎರಡು ಕಡೆಯೂ ಇಲ್ಲ.

ಶ್ರೀ ಸಿ. ಬೈರೇಗೌಡ: ಸ್ವಾಮಿ, ತಾವು ಹೇಳಿದ್ದನ್ನು ಒಪ್ಪುತ್ತೇನೆ. ಆದರೆ ಈ ಸದನವನ್ನು ನಡೆಸಬೇಕಾಗಿರತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲಿದೆ. ಆ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ಅವರನ್ನು ಕಾವಲು ಕಾಯತಕ್ಕಂಥ ಕೆಲಸವನ್ನು ನಮಗೆ ವಹಿಸಿದ್ದಾರೆ. ಈ ಕಡೆ ನಾವು ಅಷ್ಟು ಜನ ಇದ್ದರೂ ಕೂಡ ಕಾವಲು ಕಾಯುತ್ತೇವೆ ಅಥವಾ ಒಬ್ಬರೇ ಇದ್ದರೂ ಕೂಡ ಕಾವಲು ಕಾಯುವುದಕ್ಕೆ ನಾವು ತಯಾರಿದ್ದೇವೆ. ಆದರೆ ಸದನದ ಕಾರ್ಯಕಲಾಪಗಳನ್ನು ನಡೆಸಬೇಕಾಗಿರತಕ್ಕಂಥಾದ್ದು ಅವರ ಪ್ರಾಥಮಿಕ ಜವಾಬ್ದಾರಿ. ಆ ಪ್ರಾಥಮಿಕ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ನಮ್ಮ ಹತ್ತಿರ ಪ್ರತಿದಿವಸ ಹೇಳಿಸಿಕೊಂಡರೆ ಹೇಗೆ? ಸಣ್ಣ ಮಕ್ಕಳೋಪಾದಿಯಲ್ಲಿ ಇದ್ದರೆ ಬೇಡ. ಹೀಗೆ ಮಾಡಬೇಡ ಮಗು ಎಂದು ಹೇಳಬಹುದು. ಆದರೆ ಇವರ್ಯಾರು ಆ ಸ್ಥಿತಿಯಲ್ಲಿಲ್ಲ. ಮಂತ್ರಿಮಂಡಲದಲ್ಲಿ ನಮಗಿಂತ ಹಿರಿಯರಿದ್ದಾರೆ. ನಾವು ಹೇಳಿ ಹೇಳಿ, "ಹಾಡಿದ್ದೇ ಹಾಡೋ ಕಿಸಬಾಯಿ ದಾಸ" ಎನ್ನುವ ಹಾಗೆ ಈ ಕಡೆ ಇರತಕ್ಕಂಥ ನಾವುಗಳು ದಾಸರುಗಳಾಗಿದ್ದೇವೆ. ಅವರು ಆರಾಮವಾಗಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ನೋಡಿ, ಹೇಗೆ ಕುಳಿತಿದ್ದಾರೆ? ಅವರಿಗೇನಾದರೂ ಚಿಂತೆ ಇದೆಯೇ? ಅವರಿಗೆ ಕಳಕಳಿಯಿಲ್ಲ. ಅದರ ಬಗ್ಗೆ ಆಲೋಚನೆಯೂ ಇಲ್ಲ. ಚಿಂತೆಯೂ ಇಲ್ಲ. ಏನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಮಂತ್ರಿಗಳು ಗೈರುಹಾಜರಾಗಿರುವುದರಿಂದ ನಾವು ಸಂತೋಷ ಪಡುತ್ತಿಲ್ಲ. ಅನೇಕ ಮಂತ್ರಿಗಳಿಗೆ ತಮ್ಮ ಗೃಹಕೃತ್ಯದ ಒತ್ತಡ ಇರುವುದರಿಂದ ಅವರು ಸದನಕ್ಕೆ ಹಾಜರಾಗದೇ ಇರಬೇಕಾದಂಥ ಸಂದರ್ಭ ಬಂದಿದೆ.

ಶ್ರೀ ಸಿ. ಭೈರೇಗೌಡ: ಇದನ್ನು ಯಾವ ರೀತಿ ತೆಗೆದುಕೊಂಡು ಹೋಗಬೇಕು ಎನ್ನುವುದನ್ನು ನಿಮಗೇ ಬಿಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ಹಾಜರಿರಬೇಕು. ಗೈರು ಹಾಜರಾಗತಕ್ಕಂಥಾದ್ದು ಒಳ್ಳೆಯ ಲಕ್ಷಣ ಅಲ್ಲ. ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿರತಕ್ಕಂಥಾದ್ದನ್ನು ನಾನು ಗೌರವಿಸುತ್ತೇನೆ. ಮಾನ್ಯ ಮಾಡುತ್ತೇನೆ. ನಮ್ಮ ಮಂತ್ರಿಗಳು ಬೇಗ ಬರುವ ರೀತಿಯಲ್ಲಿ ನಾವು ಪ್ರಯತ್ನಪಡುತ್ತೇವೆ. ಈಗ ದಯವಿಟ್ಟು ಮುಂದಿನ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ನಮ್ಮ ನಾಯಕರಿಗೂ ನಮಗೂ ಡಿಫರೆನ್ಸ್ ಆಫ್ ಒಪಿನಿಯನ್ ಆಯಿತು. ಅದು ಏನೆಂದರೆ ನಾನು ಆ ಕಡೆಯನ್ನಷ್ಟೇ ನೋಡುವವನಲ್ಲ. ನಾವು ಈ ಕಡೆಯೂ ನೋಡಬೇಕು. ಅದನ್ನು ನಾನು ಇಲ್ಲ ಎನ್ನುವವನಲ್ಲ. ಅದನ್ನು ಒಪ್ಪಿಕೊಳ್ಳುತ್ತೇನೆ. ನಾನು ಮೊನ್ನೆಯೂ ಕೂಡ ಹೇಳಿದ್ದೇನೆ. ಮಾನ್ಯ ಸಚಿವರು ದಯವಿಟ್ಟು ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ಅರ್ಧಕ್ಕಿಂತ ಹೆಚ್ಚು ಸದಸ್ಯರಿದ್ದರೆ ಮಾತ್ರ ಕೋರಂ ಆಗಬೇಕು. ಇಲ್ಲದಿದ್ದರೆ ಸಭೆ ಅಡ್ಜರ್ನ್ ಆಗಬೇಕು ಎಂದು ತಿದ್ದುಪಡಿ ತೆಗೆದುಕೊಂಡು ಬನ್ನಿ. ಕೋರಂ ಸಂಖ್ಯೆಯನ್ನು ಚೇಂಜ್ ಮಾಡಿ. ಇಲ್ಲದಿದ್ದರೆ ಈ ಸದನಕ್ಕೆ ಯಾವ ಬೆಲೆಯೂ ಇಲ್ಲ. ನಾವು ಇಲ್ಲಿ ಕುಳಿತುಕೊಂಡು ಯಾರಿಗಾಗಿ ಮಾತನಾಡುವುದು? ತಾವೇ ಹೇಳಿ. ನಾವು ಯಾರಿಗೆ ಹೇಳಬೇಕು? ಕೆಲವರು ಪ್ರಶ್ನೆ ಕೇಳಬೇಕು. ಏನೇನೋ ವಿಚಾರಗಳನ್ನು ಕೇಳಬೇಕು ಎಂದು ಇರುತ್ತಾರೆ. ಯಾರನ್ನು ಕೇಳುವುದು? ನಿನ್ನೆ ಚೆನ್ನಾಗಿತ್ತು. ಹಾಗೆ ಆಗಬೇಕು. ಇಲ್ಲದಿದ್ದರೆ ಅದಕ್ಕೆ ಯಾವ ವ್ಯವಸ್ಥೆಯೂ ಇಲ್ಲದೆ, ಸುಮ್ಮನೆ ಮಾತನಾಡಲು ನಮಗೆ ಮನಸ್ಸು ಆಗುವುದಿಲ್ಲ. ಪೇಪರ್‌ನಲ್ಲಿ ಬರಲಿ ಎಂದು ಸುಮ್ಮನೆ ಏನೋ ಒಂದು ಮಾತನಾಡುವುದಷ್ಟೇ ಕೆಲಸವಾಗುತ್ತದೆ. ಅದಕ್ಕಾಗಿ ದಯವಿಟ್ಟು ಕೋರಂನ ತಿದ್ದುಪಡಿ ತರುತ್ತೀರಾ? ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಅಜೆಂಡಾದಲ್ಲಿ ಇಲ್ಲದೆ ಪ್ರತಿದಿವಸ ಅಲ್ಪಕಾಲಾವಧಿ ಚರ್ಚೆಯಾಗುತ್ತಿರುವ ವಿಷಯವೆಂದರೆ ಕೋರಂ ಇಲ್ಲ ಎನ್ನುವುದು. ಈ ಬಗ್ಗೆ ಪ್ರತಿದಿವಸ ಅರ್ಧ ಗಂಟೆ ಅಲ್ಪಕಾಲಾವಧಿ ಚರ್ಚೆಯಾಗುತ್ತಿದೆ. ಅಜೆಂಡಾದಲ್ಲಿ ನಾವು ಬೇರೆ ವಿಷಯಗಳನ್ನು ಕೇಳಿದರೆ ಕೊಡುವುದಿಲ್ಲ. ಆದರೆ ಇದಂತೂ ಪ್ರತಿದಿವಸ ಆಗುತ್ತಿದೆ. ಇಲ್ಲದಿದ್ದರೆ ಎಲ್ಲ ಸಚಿವರು ತಮ್ಮ ಸೆಕ್ರೆಟರಿಗಳ ಅಡ್ರೆಸ್ ಕೊಟ್ಟುಬಿಡಲಿ. ನಾವು ಹೋಗಿ ಅವರನ್ನು ಮಾತನಾಡಿಸುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಪ್ರೈಮರಿ ಸ್ಕೂಲುಗಳಲ್ಲಿ ಡ್ರಾಪ್ ಔಟ್ ಆಗುವ ರೀತಿ ಇದಾಗಿದೆ. ನೂರಕ್ಕೆ ನೂರು ಭಾಗ ಬರಬೇಕು ಎಂದು ನಾವು ಬಹಳ ಎಚ್ಚರಿಕೆ ವಹಿಸುತ್ತೇವೆ. ಆದರೆ ಇವತ್ತು ವಿಧಾನಸಭೆಯಲ್ಲೇ ಡ್ರಾಪ್‌ಔಟ್ ಆಗುವ ಪರಿಸ್ಥಿತಿ ಬಂದಿದೆ ಎಂದು ನೊಂದು ಹೇಳಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ನಾವೆಲ್ಲರೂ ಇದರಲ್ಲಿ ಭಾಗಿಗಳು. ಲೋಕಸಭೆಯಲ್ಲೂ ನೋಡುತ್ತೇವೆ. ಶಾಸನಸಭೆಯಲ್ಲೂ ನೋಡುತ್ತೇವೆ. ಈ ವಾತಾವರಣ ಅಂದರೆ ಈ ಸಂಸ್ಕೃತಿ ಹೆಚ್ಚು ಕಡಿಮೆ ಎಲ್ಲರಲ್ಲೂ ಇದೆ. ಎಲ್ಲರನ್ನೂ ಈ ರೋಗ ವ್ಯಾಪಿಸಿದೆ ಎಂದು ಹೇಳಿದರೆ ತಪ್ಪಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಹಿಂದಿನ ಸರ್ಕಾರ ಇದ್ದಾಗ ಅದಕ್ಕೆ ನಾಲ್ಕು ವರ್ಷ ಆದಾಗ ಈ ಖಾಯಿಲೆ ಬಂದಿತ್ತು. ನಮಗೆ ಈಗಲೇ ಪ್ರಾರಂಭವಾಗಿದೆಯಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಈ ಪ್ರಾಕ್ಟಿಕಲ್ ಆ್ಯಸ್ಪೆಕ್ಟ್, ಪ್ರಾಕ್ಟಿಕಲ್ ಥಿಂಕ್ ಅಲ್ಲಿಗೆ ಹೋದಾಗ ಮಾತ್ರ ಪ್ರಾರಂಭವಾಗುತ್ತದೆಯೇ? ನೀವು ಇಲ್ಲಿ ಇದ್ದಾಗ ಏಕೆ ಬರಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ: ಅಲ್ಲಿ ಯಾರೇ ಇದ್ದರೂ ಆ ಕೆಲಸ ಮಾಡಲೇಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಅಂದರೆ ನಾವು ಮಾಡುತ್ತಿರುವ ಕೆಲಸವೂ ಸರಿ, ನೀವು ಮಾಡುತ್ತಿರುವ ಕೆಲಸವೂ ಸರಿ ಎಂದು ಹೇಳುತ್ತಿದ್ದೀರೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ವಿರೋಧ ಪಕ್ಷದಲ್ಲಿರುವವರಿಗೆ ಸದನದಲ್ಲಿ ಕುಳಿತುಕೊಳ್ಳುವುದೇ ಕೆಲಸ. ಆಡಳಿತ ಪಕ್ಷದವರಿಗೆ ಬೇರೆ ಬೇರೆ ಕೆಲಸಗಳಿರುತ್ತವೆಯೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಯಾವುದೇ ಚರ್ಚೆಗೆ ವಾದಿ ಮತ್ತು ಪ್ರತಿವಾದಿಗಳು ಬಹಳ ಮುಖ್ಯ. ಪ್ರತಿವಾದಿಗಳು ನಾವು ಇದ್ದೇವೆ. ಆದರೆ ಅಲ್ಲಿ ವಾದಿಗಳ್ಯಾರೂ ಇಲ್ಲ. ಅಂದರೆ ಮಂತ್ರಿಗಳು ಒಬ್ಬರೂ ಇಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿಂದೆ ವಿರೋಧಪಕ್ಷದಲ್ಲಿದ್ದವರು ಈಗ ಅಲ್ಲಿದ್ದಾರೆ. ಬಹಳ ಒಳ್ಳೆಯದು. ಆದರೆ ನಾವು ಹೇಳಿದ್ದನ್ನು ಕೇಳುವವರು ಯಾರಾದರೂ ಇರಬೇಕಲ್ಲವೇ? ತಾವು ನ್ಯಾಯಾಧೀಶರಿದ್ದೀರಿ. ಆರ್ಡರ್ ಮಾಡಿ ಎಂದು ತಾವು ಪರ್ಮಿಷನ್ ಕೊಡುತ್ತೀರಿ. ಆದರೆ ಅಲ್ಲಿ ಕೇಳುವವರು ಇರಬೇಕಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೇ, ಇದು ಜಂಟಿ ಜವಾಬ್ದಾರಿ. ಕೇಳುವುದಕ್ಕೆ ನಾವು ಇದ್ದೇವೆ. ಮಾನ್ಯ ಸದಸ್ಯರುಗಳು ಕೇಳಿದಂಥ ಯಾವ ಪ್ರಶ್ನೆಗೆ ಉತ್ತರ ಬೇಕೋ ಅವನ್ನೆಲ್ಲಾ ಕೊಡತಕ್ಕಂಥ ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಅದರಲ್ಲೇನೂ ಹಿಂದೆ ಬೀಳುವುದಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಸದನವನ್ನು ಮಧ್ಯಾಹ್ನವೇ ಮುಂದಕ್ಕೆ ಹಾಕಿದ್ದರೂ ಆಗುತ್ತಿತ್ತು. ಯಾರೂ ಇಲ್ಲ ಎಂದು ನ್ಯಾಯಾಧೀಶರು ಮುಂದಕ್ಕೆ ಹಾಕುತ್ತಾರೆ. ಅದನ್ನಾದರೂ ಮಾಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಏನು ಮಾಡಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಈಗ ಒಂದು ವಾಕ್ಯುಮ್ ಕ್ರಿಯೇಟ್ ಆಗಿದೆ. ಆ ಕಡೆ ಹಿರಿಯ ಸಚಿವರಾದ ಕಾಗೋಡು ತಿಮ್ಮಪ್ಪನವರನ್ನು ಬಿಟ್ಟರೆ ಬೇರೆ ಇನ್ಯಾರಿದ್ದಾರೆ? ನಾರು ಯಾರ ಜೊತೆ ಚರ್ಚೆ ಮಾಡಬೇಕು? ಸಾಕಷ್ಟು ಜನ ಮಾತನಾಡುವವರಿದ್ದಾರೆ. ಪರಿಸ್ಥಿತಿ ಏನಾಗಿದೆ ಎಂದರೆ, ಟೈಂ ಸಿಗುತ್ತಿಲ್ಲ ಎಂದು ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಯಾವುದನ್ನು ಅಡ್ಜಸ್ಟ್ ಮಾಡಬೇಕು. ಯಾವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಯಾವ ವಾರ ತೆಗೆದುಕೊಳ್ಳಬೇಕು ಎಂದು ಚರ್ಚೆ ಮಾಡುತ್ತೇವೆ. ಈಗ ಸೋಮವಾರ ಬೆಳಗ್ಗೆವರೆಗೆ ಚರ್ಚೆ ಮಾಡಿ, ಮಧ್ಯಾಹ್ನ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಎಂದಾಗಿದೆ. ಇವತ್ತು 5-6 ಗಂಟೆಯವರೆಗೆ ಚರ್ಚೆ ಮಾಡಬೇಕು. ಅದಕ್ಕೆ ನಮ್ಮ ಸದಸ್ಯರು ತಯಾರಾಗಿ ಬಂದಿದ್ದಾರೆ. ಈಗ ಅಡ್ಜರ್ನ್ ಮಾಡಿದರೆ ಅಥವಾ 2-3 ತಾಸು ವೇಸ್ಟ್ ಆದರೆ ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುವವರು ಯಾರು? ಅವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ಸದನಕ್ಕೆ ಅಷ್ಟು ಮಹತ್ವ ಮತ್ತು ಗೌರವವಿದೆ. ಈ ಸದನದ ಗೌರವವನ್ನು ಉಳಿಸಿಕೊಂಡು ಹೋಗುವಂಥಾದ್ದು ಆಡಳಿತ ಪಕ್ಷದ ಕರ್ತವ್ಯ ಇಲ್ಲಿ 43 ಜನ ಸಚಿವರಿದ್ದಾರೆ. ಆದರೆ ಈಗ ಸದನದಲ್ಲಿ ಮೂರು ಜನ ಸಚಿವರು ಮಾತ್ರ ಇದ್ದಾರೆ. ಉಳಿದವರು ಎಲ್ಲಿಗೆ ಹೋದರು? ಏಕೆ ಬರುತ್ತಿಲ್ಲ? ಈಗಾಗಲೇ ಈ ಚರ್ಚೆ ಪ್ರಾರಂಭವಾಗಿ 10-15 ನಿಮಿಷವಾಯಿತು. ಇದುವವೆಗೂ ಒಬ್ಬರೂ ಸಭೆಗೆ ಹಾಜರಾಗಲಿಲ್ಲ.

ಇಲ್ಲಿ ಟೈಮ್ ವೇಸ್ಟ್ ಆಗುತ್ತಾ ಇದೆ. ನಾವು ಪ್ರತಿಯೊಂದು ನಿಮಿಷಕ್ಕೆ ಪ್ರತಿಯೊಂದು ಗಂಟೆಗೆ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಲೋಕಸಭೆಯಲ್ಲಿ ಕೂಡ ಇದೇ ವ್ಯವಸ್ಥೆ ಇದೆ ಎಂದು ಹೇಳಿದರು. ಅವರು ವಿರೋಧ ಪಕ್ಷದಲ್ಲಿ ಇದ್ದಾಗ ಒಂದು ತರಹ ಮಾತನಾಡುವುದು. ಆಡಳಿತ

ಪಕ್ಷದಲ್ಲಿ ಇದ್ದಾಗ ಒಂದು ತರಹ ಮಾತನಾಡುವುದು ಇದು ಆಗಬಾರದು. ಎಲ್ಲಾ ದೃಷ್ಟಿಯಿಂದಲೂ ತಾವು ನೋಡಬೇಕು.

ಉಪಾಧ್ಯಕ್ಷರು: ಸದನದ ಸಮಯ ಅಷ್ಟೇ ಮಹತ್ವವಾದುದು. ಅದರ ಬಗ್ಗೆ ಎರಡು ಮಾತಿಲ್ಲ. ಮಂತ್ರಿಗಳು ಸರಿಯಾಗಿ ಸದನದಲ್ಲಿ ಇಲ್ಲ. ಇದು ವಿಷಾದಕರವಾದ ಸಂಗತಿಯಾಗಿದೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಚೀಫ್ ವಿಪ್ ಅವರಿಗೆ ಹೇಳುತ್ತೇನೆ. ದಯವಿಟ್ಟು ಎಷ್ಟು ಜನ ಸದಸ್ಯರು, ಮಂತ್ರಿಗಳು ಇದ್ದಾರೋ ಅವರನ್ನು ಕರೆಸುವಂಥ ಕೆಲಸವನ್ನು ಮಾಡಲಿ. ಕಲಾಪವನ್ನು ನಿಲ್ಲಿಸುವುದು ಬೇಡ. ಸದನದ ಕಲಾಪಗಳು ನಡೆಯಲಿ.

ಶ್ರೀ ಜಗದೀಶ್ ಶೆಟ್ಟರ್: ಈ ಸಂಪ್ರದಾಯ ಮುಂದುವರೆದು ಬಿಟ್ಟಿದೆ. ಪ್ರತಿ ದಿವಸ ಕಂಟಿನ್ಯೂ ಆಗುತ್ತಾ ಇದೆ. ಬಹುಶಃ ಇದು ಹೇಗೆ ಆಗಿದೆ ಎಂದರೆ 'ಕೋಣನ ಮುಂದೆ ಕಿನ್ನರಿ ಭಾರಿಸಿದ ಹಾಗೆ' ಆಗಿದೆ. ಆಡಳಿತ ಪಕ್ಷದವರಿಗೆ ಏನೂ ಅನಿಸುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಪ್ರಾಮಾಣಿಕವಾಗಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ಬೆಳಿಗ್ಗೆ 'ಅವರು ಯಾರು ಮಂತ್ರಿಗಳು, ಅವರು ಯಾರು ಮಂತ್ರಿಗಳು' ಎಂದು ನನಗೆ ಕೇಳಿದರು. ಕೆಲವು ಮಂತ್ರಿಗಳು ಸದನಕ್ಕೆ ಬರುವುದೇ ಇಲ್ಲ. ಸ್ಪಷ್ಟವಾಗಿ ಹೇಳುತ್ತೇನೆ. ಅವರು ಯಾರು ಮಂತ್ರಿಗಳು ಎಂದು ಸದನದಲ್ಲಿಯೇ ನನ್ನನ್ನು ಕೇಳಿದ್ದಾರೆ. ಆದರೆ ನನಗೆ ಅವರು ಯಾರು ಎಂದು ಗುರುತು ಸಿಗಲಿಲ್ಲ. ನಡೆದಂಥ ನಿಜ ಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ. ಕೆಲವು ಮಂತ್ರಿಗಳಂತೂ ಸದನಕ್ಕೆ ಬಂದೇ ಇಲ್ಲ. ಇನ್ನು ಅವರ ಗುರುತನ್ನು ಹೇಗೆ ಕಂಡುಹಿಡಿಯುವುದು. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ಮಂತ್ರಿಗಳನ್ನು ಬೇಗ ಕರೆಸಿ ಎಂದು ಹೇಳಿದ್ದೇನೆ. ಈಗ ಕಲಾಪ ಪ್ರಾರಂಭ ಮಾಡೋಣ. ಇದರಲ್ಲಿಯೇ ಸಮಯವನ್ನು ಹಾಳು ಮಾಡುವುದು ಬೇಡ. ಸಮಯಕ್ಕೆ ಬಹಳ ಮಹತ್ವವಿದೆ.

ಶ್ರೀ ಎಂ. ಚಂದ್ರಪ್ಪ: ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳನ್ನು ಕರೆಸುವುದಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡಿದ್ದರೆ ಚೆನ್ನಾಗಿರುತ್ತಿತ್ತೇನೋ!

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇಲ್ಲಿ ನಾವು ಮಾತನಾಡಿದರೆ ಉತ್ತರವನ್ನು ಕೊಡುವವರೇ ಇಲ್ಲ. ಇನ್ನು ಯಾರಿಗೋಸ್ಕರ ಮಾತನಾಡುವುದು? ನಮ್ಮ ಸಮಾಧಾನಕ್ಕೋಸ್ಕರ ಮಾತನಾಡಬೇಕೆ?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರುಗಳು ಮಾತನಾಡಲಿ. ಖಂಡಿತಾ ಎಲ್ಲಿಲ್ಲದ ಉತ್ಸಾಹ ಬರುತ್ತದೆ. ಏಕೆಂದರೆ ಎದುರುಗಡೆಗೆ ದೃಷ್ಟಿ ಹಾಯಿಸಬೇಡಿ. ನಿಮಗೆ ಉತ್ಸಾಹ ಬರಬೇಕೆಂದರೆ ಅಧ್ಯಕ್ಷರನ್ನು ನೋಡಿ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ಕೊನೆಯ ಪಕ್ಷ ಗೃಹ ಮುಖ್ಯಮಂತ್ರಿಗಳಾದರೂ ಇದ್ದಿದ್ದರೆ ಸಾಕಾಗುತ್ತಿತ್ತು. ಆದರೆ ಇಬ್ಬರು ಮೂವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ.

ಶ್ರೀ ಎಂ. ಶಿವಣ್ಣ (ಆರ್ಥಿಕ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಪರವಾಗಿ 4 ಜನ ಮಂತ್ರಿಗಳು ಇಲ್ಲಿ ಇದ್ದೇವೆ. ಮಾನ್ಯ ಸದಸ್ಯರುಗಳು ಮಾತನಾಡಿದರೆ ಉತ್ತರ ಸಿಗುವಂಥದ್ದು ಆಗುತ್ತದೆಯಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ (ಕುದುವನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಇದುವರೆಗೆ ಇವರು ಎಲ್ಲಿ ಹೋಗಿದ್ದರು. ಈಗ ಹೊರಗಿನಿಂದ ಇಲ್ಲಿಗೆ ಬಂದು ಮಾತನಾಡುತ್ತಿದ್ದಾರೆ. ನಾವು ಇಲ್ಲಿ ಇಷ್ಟೆಲ್ಲಾ ಏಕೆ ಕೇಳುವುದೆಂದರೆ, ಅವರೆಲ್ಲರೂ ಸದನದಲ್ಲಿ ಕುಳಿತಿದ್ದರೆ ಸ್ಫೂರ್ತಿ ಬರುತ್ತದೆ. ನಾವೆಲ್ಲಾ ರಾಜಕಾರಣಿಗಳು. ಸಣ್ಣ ಸಭೆಯಾದರೆ ನಾವು ಜಾಸ್ತಿ ಮಾತನಾಡುವುದಿಲ್ಲ. ದೊಡ್ಡ ಸಭೆಯಾದರೆ ಜಾಸ್ತಿ ಮಾತನಾಡುತ್ತೇವೆ. ಹಾಗಾಗಿ ಇಲ್ಲಿ ಸ್ಫೂರ್ತಿ ಬರಬೇಕಾದರೆ ಎಲ್ಲಾ ಸಚಿವರುಗಳು ಬಂದು ಸದನದಲ್ಲಿ ಕುಳಿತುಕೊಳ್ಳಬೇಕು.

ಉಪಾಧ್ಯಕ್ಷರು: ತಾವು ಇಲ್ಲಿಯವರೆಗೆ ಮಾತನಾಡಿದ್ದೀರಲ್ಲಾ, ನಾಳೆ ಅದು ಪತ್ರಿಕೆಯಲ್ಲಿ ಬಂದಾಗ ನಾಳೆಯ ದಿವಸ ಸದನಕ್ಕೆ ಜಾಸ್ತಿ ಜನ ಮಂತ್ರಿಗಳು ಬರುತ್ತಾರೆ ಬಿಡಿ. ಈಗ ಕಾರ್ಯದರ್ಶಿಗಳವರಿಂದ ವರದಿ ಮಂಡನೆ.

8. ಕಾರ್ಯದರ್ಶಿಯವರ ವರದಿ:

ಕಾರ್ಯದರ್ಶಿ: ಸನ್ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆಯಿಂದ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದವರು ಶ್ರೀ ಸದಾನಂದ ಗೌಡ ಒಬ್ಬರು ಮಾತ್ರ. ಬೇರೆಯವರಿಗೆ ಅವಕಾಶ ಇಲ್ಲದ ಹಾಗೆ ಮಾಡುವುದು ಬೇಡ. ಕೊನೆಯ ಪಕ್ಷ ಪ್ರಪೋಷನ್‌ನೇಟ್ ಆಧಾರದ ಮೇಲೆ ಆದರೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ಯಾರ್ಯಾರು ಮಾತನಾಡಬೇಕೆಂದು ನೀವು ಬರೆದುಕೊಟ್ಟಿರುವ ಪ್ರತಿ ನನಗೆ ಸಿಕ್ಕಿದೆ. ಹಾಗೆಯೇ ಅವರಿಗೂ ಅವಕಾಶ ಕೊಡುತ್ತೇನೆ. ಈಗ ಪ್ರಪೋಷನ್‌ನೇಟ್ ಮೇಲೆ ಆಡಳಿತ ಪಕ್ಷದವರಿಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ನಿಜವಾಗಿ ಹೇಳುವುದಾದರೆ ಆಡಳಿತ ಪಕ್ಷದವರು ಕಡಿಮೆ ಸಮಯ ಮಾತನಾಡಬೇಕು. ಅವರು ಏನು ಮಾತನಾಡುವುದು ಇರುತ್ತದೆ? ನಾವು ಇಲ್ಲಿ ಹೇಳುವುದು, ಮಾತನಾಡುವುದು ಬಹಳ ಇರುತ್ತದೆ.

ಉಪಾಧ್ಯಕ್ಷರು: ನೀವು ಕೊಟ್ಟ ಪಟ್ಟಿ ಇಟ್ಟುಕೊಂಡು ಅವರೆಲ್ಲರಿಗೆ ಅವಕಾಶ ಕೊಡುತ್ತೇನೆ. ನೀವು ಕೊಟ್ಟಿರುವ ಪಟ್ಟಿಯಲ್ಲಿ 4 ಜನರ ಹೆಸರು ಇದೆ. ಅವರೆಲ್ಲರಿಗೆ ನಾನು ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಶ್ರೀ ಯಾಸೀನ್ ಅವರು ಮಾತನಾಡಲಿ.

9. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+SRI SYED YASIN: (Raichur): Mr. Speaker, Sir, Thanks for you for giving me the opportunity to speak over the Governor's Address. Thanks to her Excellency, the Governor of Karnataka, for her fair address